ಇ) ನಿಜವಲ್ಲ.

ಈ) ಸವರಿ ಕೆರೆಯ ಏರಿ (ಕಟ್ಟೆ) ಪೂರ್ಣಗೊಂಡಿರುತ್ತದೆ. ಈ ಕೆರೆಯ ಏರಿಗೆ ತಗಲಿರುವ ಖರ್ಚು ರೂ: 76.00ಲಕ್ಷವಾಗಿರುತ್ತದೆ.

ಉ) ಕೆರೆಯ ಏರಿ, ತೂಬುಗಳು ಹಾಗೂ ಮೂರು ಡ್ರಾಪ್‌ಗಳ ಕೆಲಸವು ಪೂರ್ಣಗೊಂಡು ಬಲದಂಡೆ ಮತ್ತು ಎಡದಂಡೆ ಕಾಲುವೆಗಳ ಕೆಲಸ ಪ್ರಗತಿಯಲ್ಲಿದೆ.

ಊ) ಎರಡು ಕೆರೆಯ ಕಾಲುವೆಗಳಿಗೆ ಈವರೆಗೆ ಇನ್ನು ಹಣ ಖರ್ಚು ಆಗಿರುವುದಿಲ್ಲ. ಈ ಹಂತದಲ್ಲಿ ಅಂತ ನಿರ್ಧರಿಸುವುದು ಆಗುವುದಿಲ್ಲ. ಎಡದಂಡೆ ಕಾಲುವೆ 1.50ಕಿ.ಮೀ ಮತ್ತು ಬಲದಂಡೆ ಕಾಲುವೆ 2.52 ಕಿ.ಮೀ. ಉದ್ದವಿರುತ್ತದೆ. ಈ ಕಾಲುವೆಗಳ ಯೋಜನೆಯಲ್ಲಿ ಕಾನಲ್ ಲೈನಿಂಗ್ ಸಿ.ಡಿ.ಗಳ ನಿರ್ಮಾಣ ಔಟಲೇಟ್‌ಗಳು ಹಾಗೂ ಎಡದಂಡೆ ಕಾಲುವೆಯ ಅಕ್ವಡೆಕ್ಟ್ ನಿರ್ಮಾಣ ಬಾಕಿ ಇರುತ್ತದೆ.

ಋ) ನೀರು ಸರಬರಾಜು ಮಾಡಲು ಉದ್ದೇಶಿಸಿದೆ.

ರಾಜ್ಯದಲ್ಲಿ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ

1378 (1632) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ 31-3-99ಕ್ಕೆ ಎಷ್ಟು;

ಆ) 1999-2000ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಏತನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು;

ಇ) ಸ್ಥಗಿತಗೊಂಡಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ರಾಜ್ಯದ ಏತ ನೀರಾವರಿ ಯೋಜನೆಗಳು ಕೆ.ಇ.ಬಿ.ಗೆ ಕಟ್ಟಬೇಕಾದ ವಿದ್ಯುತ್ ಬಾಕಿ 31-12-99ಕ್ಕೆ ಎಷ್ಟು;

ಉ) ಈಎಲ್ಲಾ ಏತ ನೀರಾವರಿ ಯೋಜನೆಗಳಿಂದ ಆಗಬೇಕಾಗಿದ್ದ ನೀರಾವರಿ ಸಾಮರ್ಥ್ಯ ಎಷ್ಟು ಎಕರೆ;

ಊ) ವಾಸ್ತವಿಕವಾಗಿ ಎಷ್ಟು ಎಕರೆ ನೀರಾವರಿ ಆಗಿರುತ್ತದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ದಿನಾಂಕ: 31-03-1999ಕ್ಕೆ ಒಟ್ಟು ಏತನೀರಾವರಿ ಯೋಜನೆಗಳು 477.

ಆ) ಒಟ್ಟು 16 ಏತ ನೀರಾವರಿ ಯೋಜನೆಗಳು.

ಇ) ಒಟ್ಟು 133 ಏತನೀರಾವರಿ ಯೋಜನೆಗಳು ಸ್ಥಗಿತ ಗೊಂಡಿದೆ. ವಿವರಗಳು ಈ ಕೆಳಕಂಡಂತೆ ಇದೆ:

ಕ್ರ ಸಂ.	ಜಿಲ್ಲೆ	ಸ್ಥಗಿತಗೊಂಡಿರುವ ಯೋಜನೆಗಳ ಸಂಖ್ಯೆ
1.	ಬೆಂಗಳೂರು (ನಗರ)	4
2.	ಬೆಂಗಳೂರು (ಗ್ರಾಮಾಂತರ)	2
3.	ಕೋಲಾರ	3
4.	ತುಮಕೂರು	9
5.	ಚಿತ್ರದುರ್ಗ	37
6.	ದಾವಣಗೆರೆ	1
7.	ಮೈಸೂರು	8
8.	ಚಾಮರಾಜನಗರ	5
9.	ಮಂಡ್ಯ	13
10.	ಹಾಸನ	4
11.	ಬೆಳಗಾಂ	11
12.	ಹಾವೇರಿ	08
13.	ಗದಗ	02
14.	ಬಿಜಾಪುರ	07
15.	ಬಾಗಲಕೋಟೆ	01
16.	ಗುಲ್ಬರ್ಗಾ	09
17.	ಕೊಪ್ಪಳ	04
18.	ಬಳ್ಳಾರಿ	05
	ಒಟ್ಟು	**133**

ಈ) 31-12-99ಕ್ಕೆ ಕಟ್ಟಬೇಕಾದ ಬಾಕಿ ರೂ. 1000.26 ಲಕ್ಷಗಳು.

ಉ) ಒಟ್ಟು 2,38,962 ಎಕರೆಗಳು.

ಊ) ಒಟ್ಟು 1,29,550 ಎಕರೆಗಳು

ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಮಾಡಿದ ವಿವಿಧ ಹುದ್ದೆಗಳ ಸಂಖ್ಯೆ

1379 (1590) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗ ಆಯ್ಕೆ ಮಾಡಿದ ವಿವಿಧ ಹುದ್ದೆಗಳ ಒಟ್ಟು ಸಂಖ್ಯೆ; (ಅಭ್ಯರ್ಥಿ ಹಾಗೂ ಹುದ್ದೆವಾರು ವಿವರಗಳನ್ನು ನೀಡುವುದು);